ಅಲ್ಲಿ ತಿಂಡಿಗಳನ್ನಷ್ಟೇ ಇಡಬೇಕು. ಬಟ್ಟೆ, ಆಟದ ಸಾಮಾನುಗಳನ್ನಲ್ಲ. ಜೊತೆಗೆ ಹೇಗೆ ಒಂದು ದಿನ ಅಂಗಡಿ ತೆರೆದು ಇನ್ನೊಂದು ದಿನ ಮುಚ್ಚಿದರೆ ಗ್ರಾಹಕರು ಬರುವುದಿಲ್ಲವೋ ಹಾಗೇ ಚಾನಲ್ ಕೂಡ ಸ್ಥಿರತೆ ಕಾಯ್ದುಕೊಂಡರೆ ಮಾತ್ರ ಚಂದಾದಾರರು ಉಳಿಯುತ್ತಾರೆ ಎಂಬುದನ್ನು ಚಾನಲ್ ಆರಂಭಿಸುವವರು ಗಮನದಲ್ಲಿಟ್ಟುಕೊಳ್ಳಬೇಕು' ಎಂದು ಸಲಹೆ ನೀಡುತ್ತಾರೆ.

## ಮಸ್ತ್ ಮಗಾ...

ವೈಯಕ್ತಿಕ ಯೂಟ್ಯೂಬ್ ಚಾನಲ್‌ಗಳ ವಿಷಯ ಒಂದೆಡೆಯಾದರೆ, ಸಾಂಸ್ಥಿಕವಾಗಿ ಯೂಟ್ಯೂಬ್ ಚಾನಲ್ ಕಟ್ಟಿಕೊಂಡು ಯಶಸ್ವಿಯಾದವರು ಕೂಡ ಇದ್ದಾರೆ. ಶಿಕ್ಷಣ, ತಂತ್ರಜ್ಞಾನ, ವೃತ್ತಿಪರ ಕೋರ್ಸ್‌ಗಳ ಕಲಿಕೆ, ಆರೋಗ್ಯ... ಇಂಥ ವಿಷಯಗಳಲ್ಲಿ ಸಾಮುದಾಯಿಕವಾಗಿ ಜನರಿಗೆ ಮಾಹಿತಿ ಹಂಚುವ ಕಾರ್ಯ ಸಾಗುತ್ತಿದೆ. ಹೀಗೆ ಸಾಂಸ್ಥಿಕವಾಗಿ ಸಾಗುತ್ತಿರುವಲ್ಲಿ ಕನ್ನಡದಲ್ಲಿ ಸುದ್ದಿ, ವಿದ್ಯಮಾನಗಳನ್ನು ಬಿತ್ತರಿಸುತ್ತಿರುವ 'ಮಸ್ತ್ ಮಗಾ' (https://bit.ly/3HL8JAA) ಯೂಟ್ಯೂಬ್ ಚಾನಲ್ ಪುಟ್ಟ ಉದಾಹರಣೆಯಾಗಬಲ್ಲದು. ಸುದ್ದಿ ಮಾಧ್ಯಮದಲ್ಲಿ ಗಳಿಸಿಕೊಂಡ ಅನುಭವಗಳನ್ನಿಟ್ಟುಕೊಂಡು ಕೆಲವು ಪತ್ರಕರ್ತರು ಸೇರಿ ಆರಂಭಿಸಿದ ಡಿಜಿಟಲ್ ಮೀಡಿಯಾ ಸ್ಟಾರ್ಟ್ ಅಪ್ ಇದಾಗಿದೆ.

ಈ ಬಗ್ಗೆ ಚಾನಲ್‌ನ ಅಮರ್ ಪ್ರಸಾದ್ ವಿವರಣೆ ನೀಡುವುದು ಹೀಗೆ: 'ನಿಷ್ಪಕ್ಷಪಾತ ಸುದ್ದಿ ಮಾಧ್ಯಮ ರೂಪಿಸುವ ಪ್ರಯತ್ನದ ಭಾಗವಾಗಿ ಯೂಟ್ಯೂಬ್ ಚಾನಲ್ ಆರಂಭಿಸಿದೆವು. ಇದಕ್ಕೆ 'ಮಸ್ತ್ ಮಗಾ' ಎಂದು ಹೆಸರಿಟ್ಟೆವು. ಈ ಹೆಸರಿನ ಕುರಿತು ಎಲ್ಲರೂ ಪ್ರಶ್ನಿಸುತ್ತಿದ್ದರು. ಸುದ್ದಿ ಮಾಧ್ಯಮವಾಗಿ ಈ ಹೆಸರು ಏಕಿಟ್ಟರಿ ಎಂದು ಕೇಳುತ್ತಿದ್ದರು. ಆದರೆ ತುಂಬಾ ಔಪಚಾರಿಕವಾಗಿ ಹೆಸರಿಡಲು ನಮಗೆ ಇಷ್ಟವಿರಲಿಲ್ಲ. ಶಿಕ್ಷಿತರು, ಅಕ್ಷರ ಜ್ಞಾನ ಇಲ್ಲದವರಿಗೂ ನಾವು ಸುಲಭವಾಗಿ ತಲುಪಬೇಕು ಎಂದು ಸಾಮಾನ್ಯ ಹೆಸರಿಟ್ಟೆವು.'

ಅಂದಹಾಗೆ, 'ಮಸ್ತ್ ಮಗಾ' ಯೂಟ್ಯೂಬ್ ಚಾನಲ್ ಆರಂಭವಾಗಿದ್ದು 2020ರಲ್ಲಿ. ರಿಯಲ್‌ಲೈನ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಡಿ ಹದಿನೆಂಟು ಮಂದಿಯ ತಂಡ ಈ ಚಾನಲ್ ಮುನ್ನಡೆಸುತ್ತಿದೆ.


ಅಮರ್ ಪ್ರಸಾದ್

'ಬೇರೆಯವರು ಏನು ಮಾಡುತ್ತಿದ್ದಾರೆ ಅದನ್ನೇ ನಾವೂ ಮಾಡಿದ್ದರೆ ಎಲ್ಲರಲ್ಲಿ ಒಂದಾಗಿ ಬಿಟ್ಟಿರುತ್ತಿದ್ದೆವು. ಆದರೆ ಇಂದು ಜನ ನಮ್ಮನ್ನು ಗುರುತಿಸುತ್ತಿದ್ದರೆ ಅದಕ್ಕೆ ನಾವು ಟ್ರೆಂಡ್ ಅನುಸರಿಸುತ್ತಿಲ್ಲ ಎಂಬುದೇ ಕಾರಣ. ಜನರಿಗೆ ಮೌಲ್ಯವಿರುವ, ಉಪಯೋಗವಾಗುವಂಥ ಗುಣಮಟ್ಟದ ಸುದ್ದಿ ನೀಡುವುದಷ್ಟೇ ನಮ್ಮ ಆದ್ಯತೆ. ಆದರೆ ಕೆಲವರು ಅಸಂಬದ್ಧವಾದ ಶೀರ್ಷಿಕೆಗಳನ್ನು ನೀಡಿ ದಾರಿ ತಪ್ಪಿಸುವಂಥ ವಿಷಯಗಳನ್ನು ಹಾಕುತ್ತಾರೆ. ದೀರ್ಘಾವಧಿಯಲ್ಲಿ ಇದು ಕೆಟ್ಟ ಪರಿಣಾಮ ಬೀರುತ್ತದೆ' ಎಂದು ಹೇಳುತ್ತಾರೆ.

ಯೂಟ್ಯೂಬ್ ಚಾನಲ್ ತೆರೆದವರ ಯಶಸ್ಸಿನ ದಾರಿ ಕೆಲವಿದ್ದರೆ, ಈ ದಾರಿಯಲ್ಲಿ ಸಾಗಿ ಸೋಲು ಕಂಡವರೂ ಇದ್ದಾರೆ. ತಕ್ಷಣ ಜನಪ್ರಿಯತೆ ಗಳಿಸುವ ಹುಮ್ಮಸ್ಸು, ಬೇಗನೆ ಹಣ ಮಾಡುವ ಉದ್ದೇಶದೊಂದಿಗೆ ದಿಕ್ಕು ದೆಸೆಯಿಲ್ಲದಂತೆ ಆರಂಭ ಮಾಡಿದ ಚಾನಲ್‌ಗಳು ಬೇಗನೆ ನೆಲಕಚ್ಚಿದ ಉದಾಹರಣೆಗಳೂ ಲೆಕ್ಕವಿಲ್ಲದಷ್ಟಿವೆ. ಹೀಗಾಗಿ ಯೂಟ್ಯೂಬ್ ಚಾನಲ್ ಆರಂಭಿಸುವ ಆಲೋಚನೆಯಲ್ಲಿದ್ದವರು ಗಮನಿಸಲೇಬೇಕಾದ

ಇದೀಗ ದೇಶ ವಿದೇಶವನ್ನೂ ತಲುಪಿದೆ. ಪ್ರತಿ ತಿಂಗಳು ಲಕ್ಷಗಟ್ಟಲೆ ಹಣವನ್ನು ಅವರ ಖಾತೆಯೂ ಜಮಾವಣೆ ಮಾಡುತ್ತಿದೆ.

### ಅನ್‌ಬಾಕ್ಸ್ ಕರ್ನಾಟಕ

ಯೂಟ್ಯೂಬ್‌ನಲ್ಲಿ ಅತಿ ಬೇಗನೆ ಸೆಳೆಯುವ ಹಾಗೂ ಎಂದಿಗೂ ಹಳತು ಎನಿಸದ ವಿಷಯ ಎಂದರೆ ಆಹಾರಅಡುಗೆ. ಇದೇ ವಿಷಯವನ್ನಿಟ್ಟುಕೊಂಡು ಕನ್ನಡದ ಇಬ್ಬರು ಸ್ನೇಹಿತರು ಕೂಡಿ ಯೂಟ್ಯೂಬ್ ಚಾನೆಲ್ ಆರಂಭಿಸುವ ಮನಸ್ಸು ಮಾಡಿದರು. ವಿಕ್ರಮ್ ಗೌಡ ಹಾಗೂ ಹರ್ಷ ಎಂಬ ಈ ಸ್ನೇಹಿತರು ಆಹಾರ ಪ್ರಿಯರು. ಅಡುಗೆ ಮಾಡುವ, ತಿನ್ನುವ ಜೊತೆಜೊತೆಗೆ ಹೊಸ ರುಚಿಯನ್ನು ಅನ್ವೇಷಿಸುವ ಹವ್ಯಾಸ. ಈ ಹವ್ಯಾಸವೇ ಅವರನ್ನು 'ಅನ್‌ಬಾಕ್ಸ್ ಕರ್ನಾಟಕ' (https://bit.ly/3OxAY87) ಯೂಟ್ಯೂಬ್ ಚಾನೆಲ್ ಆರಂಭಿಸಲು ಪ್ರೇರೇಪಿಸಿದ್ದು. ಅವರ ವಿಡಿಯೋ ಅಡುಗೆಗಳನ್ನು ಮಾತ್ರವಲ್ಲ ಆಹಾರ ಹಾಗೂ ಪ್ರವಾಸೋದ್ಯಮದ ಮೂಲಕ ಕರ್ನಾಟಕದ ಶ್ರೀಮಂತ ಸಂಸ್ಕೃತಿಯನ್ನು ಬಿಂಬಿಸುವಂತಿವೆ.

### ಟೆಕ್ ಇನ್ ಕನ್ನಡ

ತಂತ್ರಜ್ಞಾನದ ಬಗ್ಗೆ ಕನ್ನಡ ಭಾಷೆಯಲ್ಲಿ ಮಾಹಿತಿ ಸಿಗುವುದು ಕಷ್ಟಸಾಧ್ಯವೇ. ಇದಕ್ಕೆಂದೇ ಸಂದೀಪ್ ಎಂಬುವವರು ಆರಂಭಿಸಿದ್ದು 'ಟೆಕ್ ಇನ್ ಕನ್ನಡ' (https://bit.ly/3OyPrk3) ಯೂಟ್ಯೂಬ್ ಚಾನೆಲ್ ಅನ್ನು. ಈ ಚಾನಲ್‌ನಲ್ಲಿ ತಂತ್ರಜ್ಞಾನದ ಹೊರತಾಗಿಯೂ ಸಂದೀಪ್ ವ್ಲಾಗ್‌ಗಳನ್ನು ಹೊಂದಿದ್ದಾರೆ. ಅವುಗಳನ್ನು ನೋಡಲು ಇಲ್ಲಿ ಕ್ಲಿಕ್ ಮಾಡಿ...

### D&T ವ್ಲಾಗ್

ಒಬ್ಬೊಬ್ಬರಿಗೆ ಒಂದೊಂದು ಅಭಿರುಚಿ. ಅದರಲ್ಲಿ ಆಹಾರದ ವಿಷಯ ಯಾವಾಗಲೂ ಮುನ್ನೆಲೆಯಲ್ಲಿರುತ್ತದೆ. ಈ ಸಂಬಂಧ ವ್ಲಾಗ್‌ಗಳಿಗೂ ಕಡಿಮೆಯೇನಿಲ್ಲ. ಆಹಾರ ಪ್ರೀತಿಯನ್ನು ಅಭಿವ್ಯಕ್ತಿಸುವ, ಭಿನ್ನ ಭಿನ್ನ ಆಹಾರ ಪದ್ಧತಿ, ಶೈಲಿಗಳನ್ನು ಪರಿಚಯಿಸುವ, ತಿರುಗಾಟದಲ್ಲೇ ಆಹಾರ ಅನ್ವೇಷಣೆ ನಡೆಸುವ ನೈಜ ಕ್ಷಣಗಳನ್ನೇ D&T ವ್ಲಾಗ್‌ನಲ್ಲಿ(https://bit.ly/3ncLiXo) ಕಾಣಬಹುದು. ಆಹಾರ ಅಭಿರುಚಿಯಿರುವ ದಂಪತಿಯೊಬ್ಬರು ಈ ವ್ಲಾಗ್ ಮೂಲಕ ತಮ್ಮ ಅನುಭವಗಳನ್ನು ತೆರೆದಿಟ್ಟಿದ್ದಾರೆ.

### ದೇಶಿ ವಿದೇಶಿ

ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿರುವ ಕನ್ನಡತಿ ಶಾಲಿನಿ ಎಂಬುವರು ಆರಂಭಿಸಿರುವ 'ದೇಶಿ ವಿದೇಶಿ ಕನ್ನಡ ವ್ಲಾಗ್' (https://bit.ly/39H4VUF) ಇದು. ಎಂಬತ್ತು ಸಾವಿರ ಚಂದಾದಾರರನ್ನು ಹೊಂದಿರುವ ಈ ವ್ಲಾಗ್ ಅಮೆರಿಕದಲ್ಲಿ ಅವರ ಜೀವನಶೈಲಿ ಪರಿಚಯಿಸುವುದು ಮಾತ್ರವಲ್ಲ, ಶಾಲಿನಿ ಅವರ ಸಾಹಸ ಯಾನಗಳನ್ನು ತೆರೆದಿಡುತ್ತದೆ.

### ಲಿಖಿತ್ ಶೆಟ್ಟಿ ವ್ಲಾಗ್

ದೈವದ ಕಥೆಗಳು, ಆಹಾರ ಕುರಿತ ಅನುಭವಗಳು ಹಾಗೂ ಪ್ರವಾಸ ಈ ಮೂರರ ಸಂಯೋಜನೆಯನ್ನು ಲಿಖಿತ್ ಶೆಟ್ಟಿ ವ್ಲಾಗ್‌ನಲ್ಲಿ (https://bit.ly/3OeX27N) ಕಾಣಬಹುದು. ಲಿಖಿತ್ ಶೆಟ್ಟಿ ಹಾಗೂ ಸಹೋದರ ಹೇಮಂತ್ ಶೆಟ್ಟಿ ಇಬ್ಬರೂ ಕೂಡಿ ಈ ವ್ಲಾಗ್ ಆರಂಭಿಸಿದರು. ಮಾಹಿತಿ ಜೊತೆಗೆ ತಮಾಷೆಯಾಗಿರುವ ಸಂಭಾಷಣೆ ಇವರ ವ್ಲಾಗ್ ವಿಶೇಷತೆಯಾಗಿದೆ.

### ಫ್ಲೈಯಿಂಗ್ ಪಾಸ್‌ಪೋರ್ಟ್

ಆಶಾ ಹಾಗೂ ಕಿರಣ್‌ಗೆ ತಿರುಗಾಟದ ಗೀಳು. ಬೆಂಗಳೂರು ಮೂಲದ ಈ ದಂಪತಿಗೆ ಜೊತೆ ಜೊತೆಗೆ ತಿರುಗಾಡುತ್ತಾ, ಆ ತಿರುಗಾಟದ ಖುಷಿಯನ್ನು ದಾಖಲಿಸುವ ಹುಮ್ಮಸ್ಸು. ವಿಶ್ವ ಪರ್ಯಟನೆ ಮಾಡುವ ಕನಸು ಇಟ್ಟುಕೊಂಡ ಈ ದಂಪತಿ ಆ ಕನಸನ್ನು ಸಾಕಾರಗೊಳಿಸಿಕೊಳ್ಳುವ ಹಾದಿಯಲ್ಲಿದ್ದು, 'ಫ್ಲೈಯಿಂಗ್ ಪಾಸ್‌ಪೋರ್ಟ್' (https://bit.ly/3zZKywE)ನಲ್ಲಿ ಎಲ್ಲ ಅನುಭವವನ್ನೂ ಹಂಚಿಕೊಳ್ಳುತ್ತಿದ್ದಾರೆ. ಐದು ಖಂಡಗಳಿಗೆ, ಉತ್ತರ ಅಮೆರಿಕದಿಂದ ಆಫ್ರಿಕಾದ ಸಹರಾ ಮರುಭೂಮಿವರೆಗಿನ 73 ದೇಶಗಳಿಗೆ ಭೇಟಿ ನೀಡಿದ್ದಾರೆ. ಪ್ರವಾಸದ ನೈಜ ಕಥೆಯನ್ನು ದಾಖಲಿಸುತ್ತಿದ್ದಾರೆ.